# ಅಸ್ತ್ರವರ್ಸ್ ಅಯಾನ್ ಕನಸು



■ ವಿಶಾಖ ಎನ್.

ಅಸ್ತ್ರವರ್ಸ್’ ಎನ್ನುವ ಸರಣಿ ಸಿನಿಮಾಗಳನ್ನು ಮಾಡಬೇಕು ಎಂದು ನಿರ್ದೇಶಕ ಅಯಾನ್ ಮುಖರ್ಜಿ ನಿರ್ಧರಿಸಿ ವರ್ಷಗಳೇ ಆಗಿವೆ. ‘ಯೇ ಜವಾನಿ ಹೈ ದೀವಾನಿ’ ತೆರೆಕಂಡ ಮೇಲೆ ಅವರು ಇಂತಹ ಯೋಚನೆಯನ್ನು ಹಂಚಿಕೊಂಡಿದ್ದರು. ರಣಬೀರ್ ಕಪೂರ್ ಕೂಡ ಈ ಪರಿಕಲ್ಪನೆ ಕೇಳಿ ಕಣ್ಣರಳಿಸಿದ್ದರು. ಆದರೆ ಅಷ್ಟರಲ್ಲಿ ರಾಜ್‌ಕುಮಾರ್ ಹಿರಾನಿ ‘ಸಂಜು’ ಚಿತ್ರದಲ್ಲಿ ಅಭಿನಯಿಸುವಂತೆ ರಣಬೀರ್ ಎದುರು ಅವಕಾಶ ಮುಂದಿಟ್ಟಿದ್ದರು. ಅದನ್ನು ರಣಬೀರ್ ತಕ್ಷಣಕ್ಕೆ ಒಪ್ಪಿಕೊಂಡರು. ಆ ಹಂತದಲ್ಲಿ ಅಯಾನ್ ಮುಖರ್ಜಿ ಅವರಿಗೆ ಸಿಟ್ಟು ಬಂದಿತ್ತಂತೆ. ಆಮೇಲೆ ತಮ್ಮ ಮೂರು ಚಿತ್ರಗಳ ಸರಣಿಯನ್ನು ಮಾಡುವ ಆಲೋಚನೆಯನ್ನು ಅವರು ಕಾಯ್ದುಕೊಂಡೇ ಬಂದರು. ಪೂರ್ವಸಿದ್ಧತಾ ಕೆಲಸಗಳೂ ನಡೆದವು.

‘ಸಂಜು’ ತೆರೆಕಂಡು ಯಶಸ್ವಿಯಾದ ಮೇಲೆ ರಣಬೀರ್ ಕಪೂರ್ ವೃತ್ತಿಬದುಕಿಗೂ ಹೊಸ ಹೊಳಪು ಬಂದಿತು. ಅದನ್ನು ಕಂಡಮೇಲೆ ಅಯಾನ್ ಕೋಪ ತಣ್ಣಗಾಯಿತು. ವರ್ಷಗಳ ಹಿಂದೆ ಅವರು ಕಂಡಿದ್ದ ಕನಸನ್ನು ಮಾತ್ರ ಇನ್ನೂ ಮುರುಟಲು ಬಿಟ್ಟಿಲ್ಲ. ‘ಬ್ರಹ್ಮಾಸ್ತ್ರ’ ಚಿತ್ರದ ಟ್ರೈಲರ್ ತೆರೆಕಂಡಿದೆ. ಅದರಲ್ಲಿ ವಿಎಫ್‌ಎಕ್ಸ್ ಕಂಡು ಚಿತ್ರರಸಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರಣಬೀರ್ ಅಲ್ಲದೆ ಅಮಿತಾಭ್ ಬಚ್ಚನ್, ಆಲಿಯಾ ಭಟ್ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ದೀಪಿಕಾ ಪಡುಕೋಣೆ ಹಾಗೂ ಶಾರುಖ್ ಖಾನ್ ಕೂಡ ಸಣ್ಣ ಪಾತ್ರಗಳಲ್ಲಿ ಅಭಿನಯಿಸುವರು ಎಂಬ ಮಾತಿದೆ.

ಮೊದಲ ಭಾಗದ ವಿಸ್ತರಣೆಯಾಗಿ ಎರಡು ಹಾಗೂ ಮೂರನೇ ಭಾಗಗಳ ಕಥಾಹಂದರವನ್ನೂ ನಿರ್ದೇಶಕರು ಈಗಾಗಲೇ ಸಿದ್ಧಪಡಿಸಿದ್ದಾರೆ. ಹೊಸ ಹೊಸ ಪಾತ್ರಗಳು ಆ ಭಾಗಗಳಲ್ಲಿ ಸೇರ್ಪಡೆಯಾಗಲಿವೆ ಎಂದೂ ತಿಳಿಸಿದ್ದಾರೆ. ■



## ‘ವಿಕ್ರಮ್’ ಕಮಾಲ್; ಭಾವುಕ ಕಮಲ್

ಯುನೈಟೆಡ್ ಕಿಂಗ್‌ಡಂನಲ್ಲಿ ‘ವಿಕ್ರಮ್’ ತಮಿಳು ಸಿನಿಮಾ ಇದುವರೆಗೆ ಎಲ್ಲ ತಮಿಳು ಚಿತ್ರಗಳು ಮಾಡಿದ್ದ ಗಳಿಕೆಯನ್ನು ದಾಟಿ ದಾಖಲೆ ಸೃಷ್ಟಿಸಿದೆ. ಆರು ದಶಕಗಳ ಕಮಲ ಹಾಸನ್ ಚಿತ್ರಪಯಣದಲ್ಲಿ ಇಷ್ಟು ಲಾಭ ಮಾಡಿದ ಇನ್ನೊಂದು ಸಿನಿಮಾ ಬೇರಾವುದೂ ಇಲ್ಲ. ತಕ್ಷಣಕ್ಕೆ ಕಮಲ ಹಾಸನ್ ಯಶಸ್ಸಿನಿಂದ ಬೀಗುವುದಕ್ಕಿಂತ ಹೆಚ್ಚಾಗಿ, ‘ಮಾಡಿದ ಸಾಲವನ್ನು ಮೊದಲು ತೀರಿಸಿಬಿಡಬೇಕು’ ಎಂದು ಹೇಳಿರುವುದು ಯಾಕೆ ಎನ್ನುವುದು ಅವರನ್ನು ಹತ್ತಿರದಿಂದ ಬಲ್ಲವರಿಗೆ ಗೊತ್ತಿದೆ.

ಕಮಲ್ ಭಾವುಕರಾಗಿದ್ದಾರೆ. ಅವರು ಚಿತ್ರತಂಡದ ಎಲ್ಲರಿಗೂ ಸಿನಿಮಾ ಮೊದಲ ದಿನ ಸದ್ದು ಮಾಡಿದಾಗಿನಿಂದ ಉಡುಗೊರೆಗಳನ್ನು ಕೊಡುತ್ತಲೇ ಬಂದಿದ್ದಾರೆ. ನಿರ್ದೇಶಕ ಲೋಕೇಶ್ ಕನಕರಾಜ್ ಅವರಿಗೆ ಐಷಾರಾಮಿ ಕಾರ್, ಅತಿಥಿ ಪಾತ್ರದಲ್ಲಿ ನಟಿಸಿದ ನಟ ಸೂರ್ಯ ಅವರಿಗೆ ರೋಲೆಕ್ಸ್ ವಾಚ್, ಹದಿಮೂರು ಸಹಾಯಕ ನಿರ್ದೇಶಕರಿಗೆ ಒಂದೊಂದು ಬೈಕ್, ಎಲ್ಲರಿಗೂ ಧನ್ಯವಾದ ಸಮರ್ಪಿಸಲು 50 ಸೆಕೆಂಡ್‌ಗಳ ವಿಡಿಯೊ... ಇವೆಲ್ಲವನ್ನೂ ಪುಂಖಾನುಪುಂಖವಾಗಿ ಮಾಡುತ್ತಾ ಬಂದ ಕಮಲ್, ಈಗ ಖುದ್ದು ಸಿನಿಮಾ 300 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಗಳಿಸಿರುವುದರಿಂದ ಉತ್ಸಾಹಭರಿತರಾಗಿದ್ದಾರೆ.

‘ಹಣದ ಬಗೆಗೆ ಚಿಂತಿಸದೆ ಹೃದಯದ ಕಥೆಗಳನ್ನು ಹೊರಗೆ ತರುವಂತಹ ನಾಯಕ ಇರಬೇಕು. ನಾನು ಇದನ್ನು ಮೊದಲಿನಿಂದಲೂ ಹೇಳುತ್ತಿದ್ದೆ. ಈಗ ಚಕ್ಕನೆ ನನ್ನದೇ ಸಿನಿಮಾ ಮುನ್ನೂರು ಕೋಟಿ ರೂಪಾಯಿ ಗಳಿಸಿದೆ. ಇನ್ನು ನಾನು ಸಾಲ ತೀರಿಸಿ, ಯಾರು ಯಾರಿಗೆ ಏನೇನು ಕೊಡಬೇಕೋ ಎಲ್ಲವನ್ನೂ ಕೊಟ್ಟುಬಿಡಬೇಕು. ಹೃದಯದ ಕಥೆಗಳ ಸಿನಿಮಾಗಳನ್ನು ಮುಗಿಸಬೇಕು. ಇನ್ನು ನನಗೆ ಕೊಡಲು ಏನೂ ಇಲ್ಲ ಎನ್ನುವ ಮಟ್ಟಿಗೆ ಕೆಲಸ ಕೊಟ್ಟು ನಿರಾಳ ಆಗಬೇಕು. ಅದು ಪೂರ್ಣ ಮನುಷ್ಯನಾಗುವ ಬಗೆ’ ಎಂಬರ್ಥದ ಮಾತುಗಳನ್ನು ಕಮಲ್ ಆಡಿದ್ದಾರೆ.

ನಾಲ್ಕು ವರ್ಷಗಳ ನಂತರ ಕಮಲ ಹಾಸನ್ ಸಿನಿಮಾ ಸದ್ದು ಮಾಡಿದೆ. ಇದೇ ಸಂದರ್ಭದಲ್ಲಿ ತೆರೆಕಂಡ ಅಕ್ಷಯ್ ಕುಮಾರ್ ಅಭಿನಯದ ‘ಸಾಮ್ರಾಟ್ ಪೃಥ್ವಿರಾಜ್’ ಚಿತ್ರ ಯಾಕೆ ಸೋತಿತು ಎನ್ನುವ ವಿಶ್ಲೇಷಣೆಗಳೂ ಹೊರಬರುತ್ತಿವೆ. ■